**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.804/2016**

| | | |
|---|---|---|
| ಸಾಕ್ಷಿದಾರರ ಹೆಸರು | : ಹೆಚ್.ಸಿ. ಕೃಷ್ಣಮೂರ್ತಿ | ಪ್ರಾಸಾ-4 |
| ತಂದೆಯ ಹೆಸರು | : ಹೆಚ್.ಎಸ್. ಚಂದ್ರ | ಚಾಸಾ-11 |
| ವಯಸ್ಸು | : 50 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವಲಯ ಅರಣ್ಯಾಧಿಕಾರಿ | ದಿನಾಂಕಃ 06.06.2025. |
| ವಾಸಸ್ಥಳ | : ತೀರ್ಥಹಳ್ಳಿ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2009 ರಿಂದ 2018 ರವರೆಗೆ ಕೊಪ್ಪದ ಮೋಜಣಿ ಘಟಕದಲ್ಲಿ ವಲಯ ಅರಣ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಕಳಸ ವಲಯದ ವಲಯ ಅರಣ್ಯಾಧಿಕಾರಿಗಳು ಕೊಪ್ಪ ವಿಭಾಗದ ಮೋಜಣಿ ಘಟಕಕ್ಕೆ ಬರೆದಿರುವ ಪತ್ರದ ಸಂಖ್ಯೆ.1006/2014-15 ರ ದಿ.16.03.2015 ರ ಪತ್ರದಲ್ಲಿ, ಮೂಡಿಗೆರೆ ತಾಲ್ಲೂಕು ಹಾದುಓಣಿ ಗ್ರಾಮದ ಸರ್ಕಾರಿ ಸ.ನಂ.22/23 ರಲ್ಲಿ ಆರೋಪಿತರುಗಳು ಮತ್ತು ಇತರರು ಸದರಿ ಸ.ನಂ. ನಲ್ಲಿ ಮರಗಳಿಗೆ ಸುತ್ತುಪಟ್ಟಿ ಮಾಡಿರುವ ಬಗ್ಗೆ ಕಳಸ ವಲಯದ ಕೂವೆ ಶಾಖೆಯ ಉಪವಲಯ ಅರಣ್ಯಾಧಿಕಾರಿಗಳು ವರದಿ ನೀಡಿದ್ದು ಸದರಿ ವರದಿಯ ಮೇರೆಗೆ ಸದರಿ ಸ.ನಂ. ಗಳನ್ನು ಮೋಜಣಿ ಮಾಡಿ ಗಡಿ ಗುರುತಿಸಿ ಎಲ್ಲೆ ಮರಗಳ ಪಟ್ಟಿಯನ್ನು ತಯಾರಿಸಿ ವರದಿ ನೀಡುವಂತೆ ಕೇಳಿಕೊಂಡಿರುತ್ತಾರೆ. ಸದರಿ ವಲಯದ ಸಿಬ್ಬಂಧಿಗಳೊಂದಿಗೆ ಹಾದುಓಣಿ ಗ್ರಾಮದ ಗ್ರಾಮ ನಕಾಶೆಯಂತೆ ಸರ್ಕಾರಿ ಸ.ನಂ.23 ರ ಪ್ರದೇಶವನ್ನು ಮೋಜಣಿ ಮಾಡಿ ನಕಾಶೆ ತಯಾರಿಸಿ 3 ಬ್ಲಾಕ್ ಗಳಾಗಿ ವಿಂಗಡಿಸಿ, 1 ನೇ ಬ್ಲಾಕ್ ನಲ್ಲಿ 1 ರಿಂದ 26 ರ ಎಲೆ ಮರಗಳ ಪಟ್ಟಿಯನ್ನು, 2 ನೇ ಬ್ಲಾಕ್ ನಲ್ಲಿ 1 ರಿಂದ 10 ರ ಎಲೆ ಮರಗಳ ಪಟ್ಟಿಗಳು, 3 ನೇ ಬ್ಲಾಕ್ ನಲ್ಲಿ 1 ರಿಂದ 13 ರವರೆಗೆ ಎಲೆ ಮರಗಳ ಪಟ್ಟಿಯನ್ನು ತಯಾರಿಸಿ, ಸದರಿಯವರು ಹಾದುಓಣಿ ಗ್ರಾಮದ ಸರ್ಕಾರಿ ಸ.ನಂ.2 3 ರಲ್ಲಿ, 134.19 ಎಕರೆ ಪ್ರದೇಶವನ್ನು ಅನಧಿಕೃತವಾಗಿ ಒತ್ತುಮಾರಿ ಮಾಡಿ ಕಾಫೀ, ಅಡಿಕೆ ಮತ್ತು ಇತರೆ ಬೆಳೆಗಳನ್ನು ಬೆಳೆದಿರುವ ಬಗ್ಗೆ ನಾಕಾಶೆಯೊಂದಿಗೆ ಎಲೆಮರದ ಪಟ್ಟಿಯನ್ನು ಕಳಸ ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸಲಾಗಿರುತ್ತದೆ.

ಸಾಕ್ಷಿಯು ನಿಪಿ-30 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-30(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-31 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-31(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಡಿ ವಕೀಲರಿಂದಃ**

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ವೇ ಬಾಬ್ತು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ಸ.ನಂ.23 ಒಟ್ಟು ಎಷ್ಟು ವಿಸ್ತೀರ್ಣ ಎಂದು ನನಗೆ ನೆನಪಿಲ್ಲ. ಸರ್ವೇ ಮಾಡುವ ಪೂರ್ವದಲ್ಲಿ ಪ್ರಕರಣದ ಆರೋಪಿಗಳಿಗೆ ನೋಟೀಸು ಜಾರಿ ಮಾಡಿರುವುದಿಲ್ಲ. ಅವರುಗಳ ಸಮಕ್ಷಮ ನಾವು ಸರ್ವೇ ಮಾಡಿರುವುದಿಲ್ಲ. ಸರ್ವೇ ಮಾಡಿದ ದಿನಾಂಕ, ತಿಂಗಳು ಮತ್ತು ಯಾವ

ವರ್ಷ ಎಂದು ನನಗೆ ನೆನಪಿಲ್ಲ. ಸರ್ವೇ ನ ಯಾವ ಬಾಂದ್ ನಿಂದ ಮೋಜಣಿ ಯನ್ನು ಪ್ರಾರಂಭಿಸಿರುತ್ತೇವೆ ಎಂದು ಹೇಳಲು ಸಾಧ್ಯವಿಲ್ಲ. ನಿಪಿ-30 ರಲ್ಲಿ ಎಷ್ಟು ಮರಗಳ ಸುತ್ತುಪಟ್ಟಿ ಆಗಿತ್ತು ಎಂದು ನಮೂದು ಮಾಡಲಾಗಿಲ್ಲ ಮತ್ತು ಮರಗಳ ಜಾತಿಯನ್ನು ನಮೂದಿಸಿರುವುದಿಲ್ಲ. ಸರ್ವೇ ನಂ.23 ರಲ್ಲಿ ಹಿಡುವಳಿ ಜಾಗವಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಕಳಸ ಅರಣ್ಯಾಧಿಕಾರಿಗಳ ಮನವಿಯ ಮೇರೆಗ ಸರ್ವೇ ಕ್ರಮವನ್ನು ಜರುಗಿಸಿರುತ್ತೇವೆ, ಸದರಿ ಸಮಯದಲ್ಲಿ ಗ್ರಾಮ ನಕಾಶೆಯನ್ನು ತೆಗೆದುಕೊಂಡು ಹೋಗಿರುತ್ತೇವೆ. ಸ.ನಂ.23 ರಲ್ಲಿ ಒಟ್ಟು 134.19 ಎಕರೆ ಒತ್ತುವರಿ ಇದ್ದು ಅದರಲ್ಲಿ ಕಾಫೀ, ಅಡಿಕೆ ಮತ್ತು ಇತರ ಬೆಳೆಗಳನ್ನೂ ಸಹಾ ಬೆಳೆದಿರುತ್ತಾರೆ. ಸರ್ವೇ ಮಾಡುವ ಪೂರ್ವದಲ್ಲಿ ಜಮೀನು ಒತ್ತುವಾರಿ ಯಾಗಿರುವ ಬಾಬ್ತು ಯಾವುದೇ ನೋಟೀಸ್ ಜಾರಿ ಮಾಡಿರುತ್ತೀರ ಎಂದರೆ ಸದರಿ ಜಾಗವು ಕಳಸ ಅರಣ್ಯಾಧಿಕಾರಿಗಳು ವ್ಯಾಪ್ತಿಗೆ ಸೇರಿದ್ದರಿಂದ ನಮಗೆ ನೋಟೀಸ್ ಜಾರಿ ಮಾಡಲು ಬರುವುದಿಲ್ಲ.

ನಿಪಿ-30 ನ್ನು ಯಾವ ದಿನದಿಂದ ಪ್ರಾರಂಭ ಮಾಡಲಾಗಿತ್ತು ಮತ್ತು ಎಷ್ಟು ದಿನದ ವರೆಗೆ ಸದರಿ ಸರ್ವೇಯು ಮುಂದುವರೆದಿತ್ತು ಎಂದು ಯಾವ ದಾಖಲೆಯೂ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲಾತಿಗೆ ಯಾವ ದಿನ ಸಹಿಯನ್ನು ಮಾಡಲಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಸದರಿ ವಿಷಯದ ಕುರಿತು ನಿಪಿ-30 ರಲ್ಲಿ ನಮೂದಿಸಲಾಗಿರುವುದಿಲ್ಲ. ಸದರಿ ದಾಖಲಾತಿಯಲ್ಲಿರುವ ಸರ್ವೇ ನಂ.84 ರಿಂದ 86, 77, 24, 65 , 67, 25 , 30, 29, 31, 32, 33 ಮತ್ತು 69 ಯಾರ ಹೆಸರಿಗೆ ಸೇರಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಮತ್ತು ಅವರಿಗೂ ಸಹಾ ಯಾವುದೇ ನೋಟೀಸ್ ನೀಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಜಾಗವು ಕಳಸ ಅರಣ್ಯಾಧಿಕಾರಿಗಳು ವ್ಯಾಪ್ತಿಗೆ ಸೇರಿದ್ದರಿಂದ ನಮಗೆ ನೋಟೀಸ್ ಜಾರಿ ಮಾಡಲು ಬರುವುದಿಲ್ಲ. ಕಳಸ ಅರಣ್ಯಾದಿಧಕಾರಿಗಳ ಪತ್ರದ ಮೇರೆಗೆ ನಾನು ಸ.ನಂ.23 ಮೋಜಣಿಯನ್ನು ಜರುಗಿಸಿರುತ್ತೇನೆ. ಸ.ನಂ.23 ರಲ್ಲಿ ಒತ್ತುವಾರಿಯಾಗಿರುವ ಬಾಬ್ತು ನಿಪಿ-30 ರಂತೆ ವರದಿ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಖಾಸಗಿ ವ್ಯಕ್ತಿಗಳಿಗೆ ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ ಮತ್ತು ಅವರ ಸಮಕ್ಷಮ ಮೋಜಣಿ ಕ್ರಮವನ್ನು ಜರುಗಿಸಿರುವುದಿಲ್ಲ. ದಿ.16.03.2015 ರಂದು ಕಳಸದ ವಲಯ ಅರಣ್ಯಾಧಿಕಾರಿಗಳು ನಮಗೆ ಮೋಜಣಿ ಕುರಿತು ಪತ್ರವನ್ನು ಬರೆದಿರುತ್ತಾರೆ.

ನನಗೆ ಬಂದ ಪತ್ರದಲ್ಲಿ ಸಾರ್ವಜನಿಕರ ಸಮಕ್ಷಮ ಮೋಜಣಿ ಕ್ರಮವನ್ನು ಜರುಗಿಸಬೇಕು ಎಂದು ನಮೂದಿಸಿರದ ಕಾರಣ ನಾವು ಯಾವುದೇ ರೀತಿ ನೋಟೀಸನ್ನು ಸಾರ್ವಜನಿಕರಿಗೆ ನೀಡಿರುವುದಿಲ್ಲ. ಸದರಿ ಸಮಯದಲ್ಲಿ ಮೋಜಣಿ ಕ್ರಮದ ಚಿತ್ರೀಕರಣ ಮಾಡಿರುವುದಿಲ್ಲ. ಕಳಸದ ವಲಯ ಅರಣ್ಯಾಧಿಕಾರಿಗಳ ಪತ್ರದ ಪ್ರಕಾರ ನಾನು ಮೋಜಣಿ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಅವರಿಗೆ ಗೌರವ ನೀಡುವುದರಿಂದ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ.23 ರೆವಿನ್ಯೂ ಜಾಗ ಎಂದರೆ ಸರಿಯಲ್ಲ. ಸರ್ಕಾರಿ ಜಾಗವು ರೆವಿನ್ಯೂ ಜಾಗವಾದ ಕಾರಣ ನಮ್ಮ  ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಖಾಸಗಿ ವ್ಯಕ್ತಿಗಳು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿದ್ದಲ್ಲಿ ಅವರಿಗೆ ಟಿ.ಟಿ ದಂಡವನ್ನು ವಿಧಿಸುತ್ತಾರೆ ಎಂದರೆ ಅದರ ಸರಿಯಲ್ಲ. ಮೋಜಣಿ ಸಮಯದಲ್ಲಿ ಯಾರು ಯಾರು ಹಾಜರಿದ್ದರು ಎಂದು ಹೇಳಲು

ಯಾವುದೇ ರೀತಿಯ ಫೋಟೋ ತೆಗೆದಿರುವುದಿಲ್ಲ. ಸ.ನಂ.23 ರ ಮೋಜಣಿ ಬಾಬ್ತು ಕಂದಾಯ ಇಲಾಖೆಯಿಂದ ಯಾವುದೇ ರೀತಿಯ ಪತ್ರ ನಮಗೆ ಬಂದಿರುವುದಿಲ್ಲ. ಕಂದಾಯ ಇಲಾಖೆಗಳ ವ್ಯಾಪ್ತಿಗೆ ಬರುವ ಜಾಗವನ್ನು ಅರಣ್ಯ ಅಧಿಕಾರಿಗಳಿಗೆ ಮೋಜಣಿ ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಕಂದಾಯ ಇಲಾಖೆ ವ್ಯಾಪ್ತಿಗೆ ಬರುವ ಜಾಗವನ್ನು ಮೋಜಣಿ ಮಾಡುವ ಬಾಬ್ತು ADLR, DDLR ಮತ್ತು JDLR ಅಧಿಕಾರಿಗಳು ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-30 ನ್ನು ಕಛೇರಿಯಲ್ಲಿಯೇ ತಾಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸ.ನಂ.23 ರ ಮೋಜಣಿಯ ಬಾಬ್ತು ಕಲಂ 4 ರಿಂದ 17 ರ ಕರ್ನಾಟಕ ಅರಣ್ಯ ಕಾಯ್ದೆ ರಡಿಯ ನಡವಳಿಕೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-31 ನ್ನು ಸಹಾ ಕಛೇರಿಯಲ್ಲಿಯೇ ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.